ಹೆಸರಿಗೆ ಮಾಡಬೇಕೆಂದು ರೂಲ್ಸ್ ಇಲ್ಲ. 1961ರಲ್ಲಿ ಒಂದು ಸರ್ಕ್ಯುಲರ್ ಹೊರಡಿಸಿ 61ನೇ ಇಸವಿಗೆ ಮೊದಲು 6 ವರ್ಷದಿಂದ ಯಾರಿಗೆ ಕೊಟ್ಟಿದ್ದಾರೆ ಅವರೆಲ್ಲರಿಗೂ ಟಿ.ಟಿ. ಕೊಟ್ಟಿದ್ದಾರೆ ಜನರಲ್ ಆಗಿ. ಹರಿಜನರ ವಿಷಯಕ್ಕೆ ಎರಡು ವರ್ಷ ಸಾಕು, ಬೇರೆ ತರಗತಿಯವರಿಗೆ 6 ವರ್ಷ ಟಿ.ಟಿ. ಕೊಟ್ಟಿದ್ದರೆ ಅವರು ಅರ್ಜಿ ಕೊಟ್ಟರೆ ಸಂಬಂಧಪಟ್ಟ ಗ್ರಾಮಗಳಲ್ಲಿ ಅವರಿಗೆ ಪ್ರಾಕ್ಟೀಸ್ ಮಾಡಬಹುದು ಎಂದು ಸರ್ಕ್ಯುಲರ್ ಹೊರಡಿಸಿದ್ದಾರೆ, ಅದರ ಪ್ರಕಾರ ಕೆಲವರಿಗೆ ಸಿಕ್ಕಿದೆ ಕೆಲವರಿಗೆ ಸಿಕ್ಕಿಲ್ಲ. ಏಕೆಂದರೆ ಕೆಲವು ಜಮೀನುಗಳನ್ನು ಈ ಸರ್ಕ್ಯುಲರ್ ಪ್ರಕಾರ ಕೊಡುವುದಕ್ಕಾಗುವುದಿಲ್ಲ. ಸಾಮಾನ್ಯವಾಗಿ ಸಾಮಾನ್ಯ ಜನಗಳಿಗೆ ಬೇಕಾದ ಕೆಲವು ತೋಪು, ಗೋಕಟ್ಟೆ ಇವುಗಳ ಪಕ್ಕದಲ್ಲಿ ಊರಿನ ದನಗಳು ಸೇರುವ ಜಾಗದಲ್ಲಿ ಬಗರ ಸಾಗುವಳಿ ಮಾಡುತ್ತಾ ಇದ್ದರೆ ಅಂತಹ ಸ್ಥಳ ಕೊಡುವುದಕ್ಕಾಗುವುದಿಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ನನ್ನ ಪ್ರಶ್ನೆ 1942ರಲ್ಲಿ ಹಂಗಾಮಿ ಸಾಗುವಳಿಗಾಗಿ ಜಿ.ಎಂ.ಎಫ್. ಸ್ಕೀಂ ಪ್ರಕಾರ ರೈತರಿಗೆ ಸರ್ಕಾರದವರು ಏನು ಜಮೀನನ್ನು ಕೊಟ್ಟಿದ್ದರೋ ಅದನ್ನು ಕ್ಯಾನ್ಸಲ್ ಮಾಡಿದ್ದಾರೆ. ಆದರೂ ರೈತರು ಅದನ್ನು ಸಾಗುವಳಿ ಮಾಡುತ್ತಾ ಇದ್ದು ಅದಕ್ಕೆ ಟಿ.ಟಿ. ವಸೂಲು ಮಾಡುತ್ತಾ ಇದ್ದಾರೆ. 1962ರಲ್ಲಿ ರೂಲ್ಸ್ ಹೊರಡಿಸಿದ್ದಾರೆ ಅದರ ಪ್ರಕಾರ ಈ ಜಮೀನನ್ನು ಅವರಿಗೇ ಖಾಯಂ ಮಾಡಿ ರೈತರಿಗೆ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಜಿ.ಎಂ.ಎಫ್. ಸ್ಕೀಂನಲ್ಲಿ ಯಾರ್ಯಾರಿಗೆ ಜಮೀನು ಸಿಕ್ಕಿತ್ತೋ ಅದನ್ನು ಅವರವರ ಹೆಸರಿಗೇ ಮಾಡಬೇಕೆಂದು ಸರ್ಕ್ಯುಲರ್ ಇದೆ, ಅದರ ಪ್ರಕಾರ ಮಾಡುತ್ತಾ ಇದ್ದಾರೆ, ಈಗಲೂ ಕೂಡ. ಕೆಲವ ಕೇಸುಗಳಲ್ಲಿ ಆ ರೀತಿ ಆಗದೇ ಹೋಗಿರಬಹುದು.

———

Setting up of a Board for Registration of Ayurvedic and Unani Medical Practitioners.

*Q.—51. Sri SIDDIAH KASHIMATH (Shirahatti).—

Will the Government be pleased to state :—

(*a*) whether they have set up a Board for Registration of Ayurvedic and Unani Medical Practitioners in the State ;

(*b*) whether they are aware that the Vaidyas and Doctors are practising throughout the State without proper qualifications and registrations ;

(*c*) how long it would take to Government to systematically issue registration to the Medical Practitioners in Ayurvedic and Unani Systems in the State ?

A.—Sri K. NAGAPPA ALVA (Minister for Health).—

(*a*) Yes.

(*b*) Since there is no enforcement of the Practitioners Act to register their names, some persons may be taking advantage and practising.

(*c*) The Board which has been established on 15th April 1965 will be asked to expedite this matter.

ಶ್ರೀ ಸಿದ್ದಯ್ಯ ಕಾಶೀಮಠ.—ರಾಜ್ಯದಲ್ಲಿರುವ ಆಯುರ್ವೇದ ಮತ್ತು ಯುನಾನಿ ವೈದ್ಯರುಗಳ ಸಂಖ್ಯೆಯನ್ನು ಸರ್ವೆ ಮಾಡಿದ್ದೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಸರ್ವೆ ಮಾಡಿಲ್ಲ. ಅದಕ್ಕಾಗಿಯೇ ಬೋರ್ಡ್ ಸ್ಥಾಪನೆಯಾಗಿದೆ. ರಿಜಿಸ್ಟರ್ ಮಾಡಿದ ಮೇಲೆ ಲೆಕ್ಕ ಗೊತ್ತಾಗುತ್ತದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಶಾಸನ ನೋಂದಣಿ ಆಗಿಲ್ಲ ಎಂದು ಹೇಳಿದ್ದೀರಿ, ಶಾಸನ ಜಾರಿಯಲ್ಲಿ ತರುವುದಕ್ಕೆ ತೊಂದರೆ ಏನು ಇದೆ ?

ಶ್ರೀ ಕೆ. ನಾಗಪ್ಪ ಆಳ್ವ.—ತೊಂದರೆ ಏನೂ ಇಲ್ಲ. ಶಾಸನ ಜಾರಿಯಾಗುತ್ತಾ ಇದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಆಯುರ್ವೇದದ ಬೋರ್ಡ್‌ನಲ್ಲಿ ಎಷ್ಟು ಜನ ಸದಸ್ಯರಿದ್ದಾರೆ? ಸದಸ್ಯರು ಆಗಬೇಕಾದಲ್ಲಿ ಸದಸ್ಯರ ಅರ್ಹತೆಗಳು ಯಾವು ಯಾವುವು?

ಶ್ರೀ ಕೆ. ನಾಗಪ್ಪ ಆಳ್ವ.—ಸದಸ್ಯರ ಅರ್ಹತೆಗಳು ರಿಜಿಸ್ಟ್ರೇಷನ್ ಆಗಲಿಕ್ಕೆ ಯಾವ ಅರ್ಹತೆ ಬೇಕೋ ಅಂತಹ ಅರ್ಹತೆ ಅವರಲ್ಲಿದೆ.

Sri G. P. SARVESH.—May I know the names of the Members of the Board?

ಶ್ರೀ ಕೆ. ನಾಗಪ್ಪ ಆಳ್ವ.—ಡಾ. ಎನ್. ಗುಂಡಪ್ಪ, ಡಾ. ಎಂ. ಗೋಪಾಲಕೃಷ್ಣರಾವ್, ವೈದ್ಯ ಜಿ. ಪುರಾಣಿಕ್.

Mr. SPEAKER.—Have not these names appeared in the Gazette?

Sri K. NAGAPPA ALVA.—Yes.

Mr. SPEAKER.—Then reference to the Gazette may be given. The time consumed for giving such information is more important and cannot be utilised like that.

ಶ್ರೀ ಬಿ. ಎಲ್. ಗೌಡ.—ಗ್ರಾಮಾಂತರ ಪ್ರದೇಶದಲ್ಲಿ ಆಯುರ್ವೇದ ವೈದ್ಯರು, ಹಕೀಮರು, ಸರಿಯಾಗಿ ಜನಗಳಿಗೆ ಔಷಧಿ ಕೊಡದೇ ಅವರ ಆರೋಗ್ಯ ಕೆಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ? ಇದನ್ನು ನಿಲ್ಲಿಸುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಕೆ. ನಾಗಪ್ಪ ಆಳ್ವ.—ಅಂತಹ ವಿಷಯ ಸರ್ಕಾರದ ಗಮನಕ್ಕೆ ಬಂದರೆ ಕಾರ್ಯಕ್ರಮ ತೆಗೆದುಕೊಳ್ಳಬಹುದು.

ಶ್ರೀ ಭಾಸ್ಕರ ಶೆಟ್ಟಿ.—ಬೋರ್ಡ್ ರಚನೆ ಆಗಿರುವ ಉದ್ದೇಶವೇನು?

ಶ್ರೀ ಕೆ. ನಾಗಪ್ಪ ಆಳ್ವ.—ಅದೆಲ್ಲಾ ಪಬ್ಲಿಷ್ ಆಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸರ್ಕಾರದವರ ಗಮನಕ್ಕೆ ತಂದರೆ ಕಾರ್ಯಕ್ರಮ ತೆಗೆದು ಕೊಳ್ಳುತ್ತೇವೆಂದು ಹೇಳಿದ್ದೀರಿ. ಮುಕ್ಕಾಲು ಭಾಗ ಹಾಗೆ ಆದರೆ ಸರ್ಕಾರದವರ ಗಮನಕ್ಕೆ ಯಾವ ರೀತಿ ಬರಬೇಕು. ಅದನ್ನು ಕಂಡು ಹಿಡಿಯುವುದಕ್ಕೆ ಪ್ರಯತ್ನ ಮಾಡಿದ್ದೀರಿತಾ?

ಶ್ರೀ ಕೆ. ನಾಗಪ್ಪ ಆಳ್ವ.—ತಮ್ಮಂತಹ ಜವಾಬ್ದಾರಿ ವ್ಯಕ್ತಿಗಳು ಈ ವಿಷಯ ತಿಳಿಸಿದರೆ ಕಾರ್ಯಕ್ರಮ ತೆಗೆದುಕೊಳ್ಳಬಹುದು.

Extent of Land irrigated in Krishnarajpet Taluk

*Q.—62. Sri N. NANJEGOWDA (Krishnarajpet).—

Will the Government be pleased to state:—

(*a*) the average number of acres of wet land that is being irrigated per cusec of Water under the Mandagere North and South Channels and Hemagiri channels in Krishnarajpet Taluk (Channelwar details may be furnished);

(*b*) the average number of acres of land that is being irrigated per cusec of water under the Visveswarayya Canal;

(*c*) the steps that are taken to increase the extent of land that is irrigated under channels in Krishnarajpet Taluk where the extent of land irrigated is less?

A.—Sri ALUR HANUMANTHAPPA (Deputy Minister for Minor Irrigation).—

(*a*) (i) Mandageri Right Bank (South) channel—24 acres per cusec.

(ii) Mandageri left (North)—22 acres per cusec.

(iii) Hemagiri channel—20½ acres per cusec.